ಕರ್ನಾಟಕ ಸರ್ಕಾರ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಸಂಖ್ಯೆ: ಬಿಟಿಇ/04/ಇಸಿಎಸ್(2)/2022

ಆಯುಕ್ತರವರ ಕಛೇರಿ

ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ

ಅರಮನೆ ರಸ್ತೆ, ಬೆಂಗಳೂರು -560001

email:dte.commissioner@gmail.com

ದೂರವಾಣಿ ಸಂಖ್ಯೆ::080-2220777

ದಿನಾಂಕ: 07-11-2022

## ಸುತ್ತೋಲೆ

ವಿಷಯ: ಆಗಸ್ಟ್/ಸೆಪ್ಟಂಬರ್ 2022 ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳಿಂದ ಜರುಗಿದ ಮಾಲ್ ಪ್ರಾಕ್ಟಿಸ್ ಪ್ರಕರಣಗಳು / ವಿದ್ಯಾರ್ಥಿಗಳಿಂದ ಜರುಗಿದ ಲೋಪ ದೋಷ ಪ್ರಕರಣಗಳ ವಿಚಾರಣೆ ನಡೆಸುವ ಕುರಿತು.

***********

ಆಗಸ್ಟ್/ಸೆಪ್ಟಂಬರ್ 2022ರ ಡಿಪ್ಲೋಮಾ ಸೆಮಿಸ್ಟರ್ ಪರೀಕ್ಷೆಗಳಿಗೆ ಸಂಬಂಧಿಸಿದಂತೆ ವಿವಿಧ ಪರೀಕ್ಷಾ ಕೇಂದ್ರಗಳಿಂದ ವರದಿಯಾಗಿರುವ ವಿದ್ಯಾರ್ಥಿಗಳ ಶಂಕಿತ ಮಾಲ್‌ಪ್ರಾಕ್ಟಿಸ್ ಪ್ರಕರಣಗಳನ್ನು Offline/Online ಮುಖಾಂತರ ದಿನಾಂಕ:10/11/2022 ರಿಂದ 18/11/2022 ರ ತನಕ ವಿದ್ಯಾರ್ಥಿಗಳ ವಿಚಾರಣೆ ನಡೆಸಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲು ನಿರ್ಣಯಿಸಲಾಗಿದೆ.

ವಿದ್ಯಾರ್ಥಿಗಳ ಶಂಕಿತ ಮಾಲ್‌ಪ್ರಾಕ್ಟಿಸ್ ಪ್ರಕರಣಗಳ ವಿಚಾರಣಾ ಸಮಿತಿಯು, ತಾಂತ್ರಿಕ ಪರೀಕ್ಷ ಮಂಡಳಿಯ ಕಾರ್ಯದರ್ಶಿಗಳು, ಉಪನಿರ್ದೇಶಕರು, ವಿವಿಧ ವಿಷಯ ಸಮಿತಿಗಳ ಅಧ್ಯಕ್ಷರುಗಳನ್ನು ಒಳಗೊಂಡಿರುತ್ತದೆ.

ಸದರಿ ಪರೀಕ್ಷೆಗೆ ಸಂಬಂಧಿಸಿದಂತೆ ವಿವಿಧ ನೋಡಲ್ ಕೇಂದ್ರಗಳ ವಿದ್ಯಾರ್ಥಿಗಳು ಬೆಂಗಳೂರಿಗೆ ಬರುವುದನ್ನು ತಪ್ಪಿಸುವ ಸಲುವಾಗಿ ವಿದ್ಯಾರ್ಥಿಗಳ ಸಂದಣಿಯನ್ನು ಕಡಿಮೆಗೊಳಿಸುವ ಸಲುವಾಗಿ ಹಾಗೂ ಸಾಮಾಜಿಕ ಅಂತರ ಕಾಯ್ದುಕೊಳ್ಳುವ ನಿಟ್ಟಿನಲ್ಲಿ ಬೆಂಗಳೂರು ವಿಕೇಂದ್ರೀಕೃತ ನೋಡಲ್ ಕೇಂದ್ರವನ್ನು ಹೊರತುಪಡಿಸಿ ಉಳಿದ 14 ವಿಕೇಂದ್ರೀಕೃತ ನೋಡಲ್ ಕೇಂದ್ರಗಳ ವಿದ್ಯಾರ್ಥಿಗಳಿಗೆ ಹಾಗೂ ಸಂಬಂಧಪಟ್ಟ ಅನ್ವಯಿಸುವ ಪರೀಕ್ಷಾ ಅಧಿಕಾರಿಗಳಿಗೆ Online VC ಮುಖಾಂತರ ಶಂಕಿತ ಮಾಲ್‌ಪ್ರಾಕ್ಟಿಸ್ ವಿಚಾರಣೆಯನ್ನು ನಡೆಸಲು ಉದ್ದೇಶಿಸಲಾಗಿದೆ.

ವಿದ್ಯಾರ್ಥಿ ಮಾಲ್‌ಪ್ರಾಕ್ಟಿಸ್ ವಿಚಾರಣೆ (SMP) ಸಮಿತಿಯಲ್ಲಿ ನೋಡಲ್ ಕೇಂದ್ರದ ಪ್ರಾಂಶುಪಾಲರನ್ನು ಸದಸ್ಯರು ಎಂದು ಪರಿಗಣಿಸಿ, ಪ್ರಾಂಶುಪಾಲರು ಸಂಬಂಧಿಸಿದ ನೋಡಲ್ ಕೇಂದ್ರದಲ್ಲಿ ಆ ನೋಡಲ್ ಕೇಂದ್ರದ

ವ್ಯಾಪ್ತಿಗೆ ಬರುವ ಎಲ್ಲಾ ಪಾಲಿಟೆಕ್ನಿಕ್‌ಗಳ/ಅನ್ವಯಿಸುವ ಪಾಲಿಟೆಕ್ನಿಕ್‌ಗಳಲ್ಲಿ SMP ಆಗಿರುವ ವಿದ್ಯಾರ್ಥಿಗಳನ್ನು ಕರೆಸಿ ನಿಗದಿಪಡಿಸಲಾಗಿರುವ ದಿನಾಂಕದಂದು Online meeting VC ನಲ್ಲಿ ವಿದ್ಯಾರ್ಥಿಗಳು ಹಾಜರಾಗಿ ಹೇಳಿಕೆ ನೀಡುವ ಸೂಕ್ತ ವ್ಯವಸ್ಥೆ ಮಾಡಲು ನೋಡಲ್ ಕೇಂದ್ರದ ಪ್ರಾಂಶುಪಾಲರುಗಳಿಗೆ ತಿಳಿಸಲಾಗಿದೆ.

ಬೆಂಗಳೂರು ಸೇರಿದಂತೆ 15 ವಿಕೇಂದ್ರೀಕೃತ ನೋಡಲ್ ಕೇಂದ್ರದ ವ್ಯಾಪ್ತಿಗೆ ಒಳಪಡುವ SMP ವಿದ್ಯಾರ್ಥಿಗಳ ವಿವರಗಳನ್ನು ಲಗತ್ತಿಸಿರುವ ಕೋಷ್ಟಕದಲ್ಲಿ ನೀಡಲಾಗಿದೆ.

ನಿಗದಿಪಡಿಸಿರುವ ದಿನಾಂಕದಂದು Online VC ಮುಖಾಂತರ ವಿದ್ಯಾರ್ಥಿಗಳ SMP ವಿಚಾರಣೆಯನ್ನು ನಡೆಸಲಾಗುವುದು. ವಿದ್ಯಾರ್ಥಿಗಳು ಸದರಿ ವಿಚಾರಣೆಗೆ ಗೈರುಹಾಜರಾಗಿ ಯಾವುದೇ ಹೇಳಿಕೆಯನ್ನು ನೀಡದ ಪಕ್ಷದಲ್ಲಿ ಆ ವಿದ್ಯಾರ್ಥಿಗಳ SMP ಪ್ರಕರಣದ ಬಗ್ಗೆ ಹೇಳುವುದು ಏನು ಇಲ್ಲವೆಂದು ಭಾವಿಸಿ ಸಮಿತಿಯು ಅಂತಹ ವಿದ್ಯಾರ್ಥಿಗಳ ಪ್ರಕರಣಗಳನ್ನು ತೀರ್ಮಾನಿಸುತ್ತದೆ ಹಾಗೂ ಅದು ಅಂತಿಮವಾಗಿರುತ್ತದೆ.

ಕಾರ್ಯದರ್ಶಿ

ಇವರಿಗೆ,

1. ಸಂಬಂಧಪಟ್ಟ ಪ್ರಿನ್ಸಿಪಾಲರುಗಳಿಗೆ - ಮುಂದಿನ ಕ್ರಮಕ್ಕಾಗಿ

2. ಸಂಬಂಧಪಟ್ಟ ಪರೀಕ್ಷಾ ಕೇಂದ್ರದಲ್ಲಿ ಮಾರ್ಚ್/ಏಪ್ರಿಲ್ 2022 ರ ಥಿಯರಿ ಪರೀಕ್ಷೆಗಳ ಪರೀಕ್ಷಾ ಮುಖ್ಯ ಅಧೀಕ್ಷಕರು, ಉಪಮುಖ್ಯ ಅಧೀಕ್ಷಕರು, ಕೊಠಡಿ ಮೇಲ್ವಿಚಾರಕರು, ಇವರುಗಳು ಸಂಬಂಧಪಟ್ಟ ವಿದ್ಯಾರ್ಥಿಯು ಮಾಡಿದ SMPಯ ಬಗ್ಗೆ ಲಿಖಿತ ಹೇಳಿಕೆ ನೀಡುವ ಸಲುವಾಗಿ

3. ಆಗಸ್ಟ್/ಸೆಪ್ಟಂಬರ್ 2022ರ ರ ಪರೀಕ್ಷೆಯಲ್ಲಿ SMP ಮಾಡಿದ ವಿದ್ಯಾರ್ಥಿಗಳ ಗಮನಕ್ಕೆ ಸಂಸ್ಥೆಯ ಪ್ರಾಂಶುಪಾಲರ ಮುಖಾಂತರ, ಸಂಬಂಧಪಟ್ಟ ವಿದ್ಯಾರ್ಥಿಗಳು ಲಿಖಿತ ಹೇಳಿಕೆ/ SMP ಒಪ್ಪುತ್ತೇನೆ/ SMP ಒಪ್ಪುವುದಿಲ್ಲ ಎಂಬ ಮುಚ್ಚಳಿಕೆ ನೀಡುವ ಸಲುವಾಗಿ.

ಪ್ರತಿ:

1) ಸಂಬಂಧಪಟ್ಟ ನೋಡಲ್ ಕೇಂದ್ರದ ಪ್ರಾಂಶುಪಾಲರ ಇ-ಮೇಲ್‌ಗಳಿಗೆ ಕಳುಹಿಸುವ ಸಲುವಾಗಿ

2) ಕಾರ್ಯದರ್ಶಿಯವರ ಆಪ್ತ ಶಾಖೆ

3) ಇಸಿಎಸ್ - ಕಡತಕ್ಕೆ